# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 382
2. ಸದಸ್ಯರ ಹೆಸರು : ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು)
3. ಉತ್ತರಿಸಬೇಕಾದ ದಿನಾಂಕ : 07.12.2023.
4. ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಗಳು

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಗ್ಯಾರಂಟಿ ಯೋಜನೆ ಅನುದಾನವನ್ನು ಒದಗಿಸುವುದರಿಂದ ರಾಜ್ಯದ ಅಭಿವೃದ್ಧಿಗೆ ಹಿನ್ನಡೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಕಳೆದ 6 ತಿಂಗಳಲ್ಲಿ ಸರ್ಕಾರ ಕೈಗೊಂಡ ಅಭಿವೃದ್ಧಿ ಕಾರ್ಯಕ್ರಮಗಳೇನು; (ಮಾಹಿತಿ ನೀಡುವುದು) | ಸರ್ಕಾರವು ಪ್ರಸಕ್ತ ವರ್ಷದಿಂದ ಜಾರಿಗೆ ತಂದಿರುವ ಗ್ಯಾರಂಟಿ ಯೋಜನೆಗಳಿಗೆ ಆಯವ್ಯಯದಲ್ಲಿಯೇ ಸೂಕ್ತ ಅನುದಾನವನ್ನು ಕಲ್ಪಿಸಿರುತ್ತದೆ. ಗ್ಯಾರಂಟಿ ಯೋಜನೆಗಳ ವೆಚ್ಚವನ್ನು ಆಯವ್ಯಯದಲ್ಲಿ ಕಲ್ಪಿಸಿರುವ ಅನುದಾನದಿಂದಲೇ ಭರಿಸುತ್ತಿದ್ದು, ಈ ಯೋಜನೆಗಳ ವೆಚ್ಚಕ್ಕೆ ಇತರೆ ಅಭಿವೃದ್ಧಿ ಯೋಜನೆಗಳಿಗೆ ನೀಡಿರುವ ಅನುದಾನವನ್ನು ಬಳಸುತ್ತಿರುವುದಿಲ್ಲ ಆದ್ದರಿಂದ ರಾಜ್ಯದ ಅಭಿವೃದ್ಧಿ ಕಾರ್ಯಗಳಿಗೆ ಯಾವುದೇ ಹಿನ್ನಡೆಯಾಗಿರುವುದಿಲ್ಲ.<br>ಸರ್ಕಾರವು ಆಯವ್ಯಯದಲ್ಲಿ ಘೋಷಿಸಿದ್ದ ಎಲ್ಲಾ ಅಭಿವೃದ್ಧಿ ಕಾಮಗಾರಿಗಳನ್ನು ಅನುಷ್ಠಾನಕ್ಕೆ ತರಲು ಕ್ರಮವಹಿಸಲಾಗುತ್ತಿದೆ.<br>ಪ್ರಸಕ್ತ ವರ್ಷದಲ್ಲಿ ನವೆಂಬರ್ ತಿಂಗಳ ಅಂತ್ಯದವರೆಗು ವಿವಿಧ ಇಲಾಖೆಗಳಲ್ಲಿ ಅಭಿವೃದ್ಧಿ ಮತ್ತು ಕಲ್ಯಾಣ ಕಾರ್ಯಕ್ರಮಗಳಿಗೆ ಒಟ್ಟು 73,928 ಕೋಟಿ ರೂ.ಗಳ ವೆಚ್ಚವನ್ನು ಮಾಡಲಾಗಿರುತ್ತದೆ. (ಆರ್ಥಿಕ ವರ್ಷ 2022-23ರಲ್ಲಿ ನವೆಂಬರ್ ಅಂತ್ಯಕ್ಕೆ ಅಭಿವೃದ್ಧಿ ಮತ್ತು ಕಲ್ಯಾಣ ಕಾರ್ಯಕ್ರಮಗಳಿಗೆ 70,814 ಕೋಟಿ ರೂ. ಗಳ ವೆಚ್ಚವಾಗಿರುತ್ತದೆ). |
| ಆ | ಗ್ಯಾರಂಟಿ ಭಾಗ್ಯಗಳಿಗೆ ಅನುದಾನವನ್ನು ಒದಗಿಸಲು ಸರ್ಕಾರವು ಇತರೆ ಇಲಾಖೆಗಳ ಅಭಿವೃದ್ಧಿ ಅನುದಾನವನ್ನು ಬಳಸಿಕೊಳ್ಳುತ್ತಿರುವುದು ಸರಿಯೇ; ಇದರಿಂದಾಗಿ ಇಲಾಖಾವಾರು | ಗ್ಯಾರಂಟಿ ಯೋಜನೆಗಳಿಗೆ ಸರ್ಕಾರವು ಆಯವ್ಯಯದಲ್ಲಿಯೇ ಅನುದಾನ ಒದಗಿಸಿದ್ದು, ಇತರೆ ಇಲಾಖೆಗಳ ಅಭಿವೃದ್ಧಿ ಅನುದಾನವನ್ನು ಬಳಸುತ್ತಿರುವುದಿಲ್ಲ. ಆದ್ದರಿಂದ ಇತರೆ ಇಲಾಖೆಗಳ ಅಭಿವೃದ್ಧಿಗೆ ಕಾರ್ಯಗಳಿಗೆ ಯಾವುದೇ ಹಿನ್ನಡೆಯಾಗಿರುವುದಿಲ್ಲ. |

<table>
<tr><td></td><td>ಅಭಿವೃದ್ಧಿ ಯೋಜನೆಗಳಿಗೆ ಹಿನ್ನಡೆ ಉಂಟಾಗಿ ಭವಿಷ್ಯದಲ್ಲಿ ಎದುರಾಗಲಿರುವ ಹೊಸ ಮತ್ತು ಹಳೆ ಕಾಮಗಾರಿ ಅನುಷ್ಠಾನ, ಅನುದಾನ ಜೋಡಣೆ ಈ ರೀತಿ ಕಾರ್ಯಗಳಿಗೆ ತೊಂದರೆ ಆಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದನ್ನು ಯಾವ ರೀತಿ ಸರಿದೂಗಿಸಲಾಗುತ್ತಿದೆ.; (ಇಲಾಖೆವಾರು ಮಾಹಿತಿ ನೀಡುವುದು)</td><td></td></tr>
<tr><td>ಇ</td><td>ಗ್ಯಾರಂಟಿ ಯೋಜನೆಗಳಿಗೆ ಪ್ರಸಕ್ತ ಸಾಲಿನಲ್ಲಿ ಮೀಸಲಿಟ್ಟ ಅನುದಾನ ಎಷ್ಟು; ಪ್ರಸ್ತುತ ಖರ್ಚಾದ ಅನುದಾನ ಎಷ್ಟು? (ಈ ಕುರಿತು ಸಂಪೂರ್ಣ ಮಾಹಿತಿ ನೀಡುವುದು)</td><td>ಸರ್ಕಾರದ ಐದು ಗ್ಯಾರಂಟಿ ಯೋಜನೆಗಳಿಗೆ ಪ್ರಸಕ್ತ ಸಾಲಿನಲ್ಲಿ ಒದಗಿಸಿರುವ ಅನುದಾನ ಮತ್ತು ನವೆಂಬರ್ ತಿಂಗಳ ಅಂತ್ಯದವರೆಗು ಖರ್ಚಾಗಿರುವ ವಿವರಗಳು ಕೆಳಕಂಡಂತಿದೆ
<table>
<tr><th>ಕ್ರ.ಸಂ</th><th>ಗ್ಯಾರಂಟಿ ಯೋಜನೆ</th><th>2023-24 ರ ಆಯವ್ಯಯ ಅನುದಾನದ ಅಂದಾಜು (ಕೋಟಿ ರೂ.ಗಳು)</th><th>ಖರ್ಚಾದ ಅನುದಾನ (ಕೋಟಿ ರೂ.ಗಳು)</th></tr>
<tr><td>1</td><td>ಗೃಹ ಲಕ್ಷ್ಮಿ</td><td>17,500</td><td>5,372</td></tr>
<tr><td>2</td><td>ಗೃಹ ಜ್ಯೋತಿ</td><td>9,000</td><td>2,902</td></tr>
<tr><td>3</td><td>ಅನ್ನ ಭಾಗ್ಯ</td><td>7,307</td><td>3,357</td></tr>
<tr><td>4</td><td>ಯುವ ನಿಧಿ</td><td>250</td><td>0</td></tr>
<tr><td>5</td><td>ಶಕ್ತಿ</td><td>2,800</td><td>1,375</td></tr>
<tr><td></td><td>ಒಟ್ಟು</td><td>36,857</td><td>13,005</td></tr>
</table>
*ಗ್ಯಾರಂಟಿ ಯೋಜನೆಗಳಿಗೆ ಬೇಕಾಗಿರುವ ಅನುದಾನದ ಅಂದಾಜು ಮೊತ್ತವು ಫಲಾನುಭವಿಗಳ ನೋಂದಣಿ ಆಧಾರದ ಮೇಲೆ ವ್ಯತ್ಯಾಸವಾಗಲಿದೆ.</td></tr>
</table>

FD/112/2023-DS-BR-FINANCE DEPT.SEC

(ಸಿದ್ದರಾಮಯ್ಯ)
ಮುಖ್ಯಮಂತ್ರಿ